ಶ್ರೀ ಎಂ. ರಾಮಪ್ಪ :- ಒಳ್ಳೆಯ ಸಲಹೆ. ಕೆಲವರು ಹಿಡಿದುಕೊಟ್ಟಿದ್ದಾರೆ. ಅವರಿಗೆ ನಾವು ಬಹುಮಾನವನ್ನು ಕೂಡ ಕೊಟ್ಟಿದ್ದೇವೆ. ಹಿಡಿದು ಕೊಟ್ಟವರಿಗೆ ನಾವು ಬಹುಮಾನವನ್ನು ಕೊಡುವುದಕ್ಕೆ ರೆಡಿ ಇದ್ದೇವೆ.

ಶ್ರೀ ರಮಾನಾಥ ರೈ :- ಮಾನ್ಯ ಉಪಾಧ್ಯಕ್ಷೆಯವರೇ, ಮಾನ್ಯ ಸಚಿವರು ....

SRI QAUMARUL ISLAM : He has used the word 'screw' in what context he has used that word? ಆಫೀಸರನ್ನು ಸ್ಕ್ರೂ ಮಾಡಿ ಎಂದು ಹೇಳಿದರೆ ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದರು?

ಶ್ರೀ ಎಲ್. ಆರ್. ಶಿವರಾಮೇಗೌಡ :- ಆಫೀಸರ್‌ನ್ನು ಸ್ಕ್ರೂ ಮಾಡಿ ಎಂದರೆ ಅವರನ್ನು ಟೈಟ್ ಮಾಡಿ ಎಂದು. ಸ್ಕ್ರೂ ಎಂದರೆ ಸ್ಕ್ರೂ ಡ್ರೈವರ್ ತೆಗೆದುಕೊಂಡು ನಟ್ಟನ್ನು ಟೈಟ್ ಮಾಡುತ್ತಾರಲ್ಲಾ, ಆ ರೀತಿ ಅಧಿಕಾರಿಗಳಿಗೆ ಟೈಟ್ ಮಾಡಿ ಎಂದು. ಆ ರೀತಿ ಅಧಿಕಾರಿಗಳನ್ನು ಟೈಟ್ ಮಾಡಿದರೆ ಅಧಿಕಾರಿಗಳು ಸರಿಹೋಗುತ್ತಾರೆ.

ಶ್ರೀ ರಮಾನಾಥ ರೈ :- ಮಾನ್ಯ ಉಪಾಧ್ಯಕ್ಷೆಯವರೇ, ಮಾನ್ಯ ಸಚಿವರು ವಿದ್ಯುಚ್ಛಕ್ತಿ ಸೋರಿಕೆ ಬಗ್ಗೆ ಕಳ್ಳತನ ಮಾಡುತ್ತಿದ್ದಾರೆ ಎಂದು ಯಾರಾದರೂ ಹೇಳಿದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಒಂದು ವೇಳೆ ಆ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇವೆ ಎಂದು ತೀರ್ಮಾನ ತೆಗೆದುಕೊಳ್ಳಿ. ನಾವು ಯಾರನ್ನಾದರೂ ಹಿಡಿದುಕೊಟ್ಟರೆ ತಾವು ಕ್ರಮವನ್ನು ತೆಗೆದುಕೊಳ್ಳುತ್ತೀರಾ ? ತೆಗೆದುಕೊಳ್ಳುತ್ತೇವೆಂದು ಆ ಬಗ್ಗೆ ತಾವು ಭರವಸೆಯನ್ನು ಕೊಡಬೇಕು.

ಶ್ರೀ ಎಂ. ರಾಮಪ್ಪ : ಖಂಡಿತವಾಗಿಯೂ ಮಾಡುತ್ತೇನೆ.

ಹೋಟೆಲ್‌ನಲ್ಲಿ ತಿಂಡಿ ದರಗಳ ಏರಿಕೆ

1349. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ರಾಜ್ಯದಲ್ಲಿ ಹೋಟೆಲುಗಳ ತಿಂಡಿ ಹಾಗೂ ಊಟದ ಬೆಲೆ ದಿನ ದಿನಕ್ಕೆ ದುಭಾರಿಯಾಗಿ ಜನಸಾಮಾನ್ಯರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
2) ಹಾಗಿದ್ದಲ್ಲಿ, ಹೋಟೆಲುಗಳ ತಿಂಡಿ ಮತ್ತು ಊಟದ ಬೆಲೆಗಳನ್ನು ಇಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?
3) ಹೋಟೆಲುಗಳಲ್ಲಿನ ಬೆಲೆಗಳನ್ನು ಕಾಲಕಾಲಕ್ಕೆ ತನಿಖೆ ಮಾಡುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

1) ಹೌದು
2) ಹೋಟೆಲು ಮಾಲೀಕರ ಸಂಘದೊಂದಿಗೆ ಆಗಿಂದಾಗ್ಗೆ ಸಭೆ ನಡೆಸಿ ಹೋಟೆಲುಗಳಲ್ಲಿಯ ಬೆಲೆಗಳನ್ನು ಇಳಿಸಲು ಪ್ರಯತ್ನಿಸಲಾಗುತ್ತಿದೆ. ಹೋಟೆಲುಗಳಲ್ಲಿ ತಿಂಡಿ ಹಾಗೂ ಊಟದ ಬೆಲೆಗಳು ಹೆಚ್ಚಾಗುವ ಸಂದರ್ಭದಲ್ಲಿ ಈ ಬೆಲೆಗಳನ್ನು ಇಳಿಸಲು ಯಾವ ಕ್ರಮದ ಅವಶ್ಯಕತೆ ಇದೆ ಎಂಬುದನ್ನು ಕಂಡುಕೊಳ್ಳಲು ಸರ್ಕಾರವು ಆಹಾರ ಮತ್ತು ಸಾರಿಗೆ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ದಿನಾಂಕ 07.07.85 ರಂದು ರಚಿಸಿದೆ.
3) ಇಲ್ಲ

ಶ್ರೀ ಎಂ.ವಿ. ವೆಂಕಟಪ್ಪ :- ಮಾನ್ಯ ಉಪಾಧ್ಯಕ್ಷರೆಯವರೆ, ಸಚಿವರು ಉತ್ತರದಲ್ಲಿ 1985 ರಲ್ಲಿಯೇ ಸಮಿತಿಯನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಆ ಸಮಿತಿ ಇದುವರೆಗೂ ಎಷ್ಟು ಸಾರಿ ಸೇರಿತ್ತು ಏನು ತೀರ್ಮಾನ ಕೈಗೊಂಡಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಮಾನ್ಯ ಉಪಾಧ್ಯಕ್ಷರೆಯವರೆ, 1985 ರಲ್ಲಿಯೇ ಈ ಸಮಿತಿ ರಚನೆಯಾಗಿದೆ. ತಾವು ಈ ಪ್ರಶ್ನೆಯನ್ನು ಕೇಳಿದಮೇಲೆ ವಿವರವನ್ನು ತರಿಸಿದ್ದೇನೆ. ನಮ್ಮ ಫುಡ್ ಅಂಡ್ ಟ್ರಾನ್ಸ್‌ಪೋರ್ಟ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಈ ಸಮಿತಿ ಆಗಿದೆ. ಅದಕ್ಕೆ ಇನ್ನು 10 ಜನ ಸದಸ್ಯರುಗಳು ಇದ್ದಾರೆ. 1985 ರಲ್ಲಿಯೇ ಸಮಿತಿ ರಚನೆಯಾಗಿದೆ. ಒಮ್ಮೆಯು ಈ ಸಮಿತಿ ಸೇರದೆ ಇರುವುದಕ್ಕೆ ನನಗೂ ಆಶ್ಚರ್ಯವಾಗಿದೆ. ಏತಕ್ಕೆ ಸೇರಿಲ್ಲ ಎನ್ನುವ ಬಗ್ಗೆ ಸ್ಪಷ್ಟೀಕರಣ ಕೇಳುತ್ತೇನೆ. ಇನ್ನು 15 ದಿವಸಗಳೊಳಗಾಗಿ ಸಮಿತಿ ಕೂಡಲೇ ಸೇರಬೇಕೆಂದು ನಾನು ಆದೇಶ ಕೊಡುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ :- ತಮಗೆ ಹೋಟಲಿಗೆ ಹೋಗಿ ಅಭ್ಯಾಸ ಇದೆಯೋ ಇಲ್ಲವೋ ಗೊತ್ತಿಲ್ಲ. ಕೆಲವು ಹೋಟಲ್ ನಲ್ಲಿ ದೋಸೆ 8 ರೂಪಾಯಿ ಇದೆ. ಇಡ್ಲಿವಡೆ 6 ರೂಪಾಯಿ ಇದೆ. ಪೂರಿ 8 ರೂಪಾಯಿ ಇದೆ, ಟೀ ಕಾಫಿಯನ್ನು ತೆಗೆದುಕೊಂಡರೆ ಒಟ್ಟು 18 ರೂಪಾಯಿಯಾಗುತ್ತದೆ. ಆ 18 ರೂಪಾಯಿಯನ್ನು ಕೊಟ್ಟು ಬೆಳಗಿನ ತಿಂಡಿಯನ್ನು ಮಾಡುವ ಬದಲು 18 ರೂಪಾಯಿಯನ್ನು ಕೊಟ್ಟರೆ ಊಟವನ್ನೇ ಮಾಡಬಹುದು. ಏಷ್ಟೋ ಸಲ ಈ ರೀತಿ ಆಗುತ್ತದೆ. ಬೆಳಿಗ್ಗೆ ಹೊತ್ತು ಊಟಮಾಡುವುದಕ್ಕೆ ಆಗುವುದಿಲ್ಲ. ತಿಂಡಿಯನ್ನು ತಿನ್ನುವಾಗ ಊಟವನ್ನು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ತಾವು ಹೋಟಲಿಗೆ ಹೋಗಿ ಚೆಕ್ ಮಾಡುತ್ತೀರಾ ? ತಾವು ಚೆಕ್ ಮಾಡುವುದಕ್ಕೆ ಹೋಗುವಾಗ ನನ್ನನ್ನು ಕರೆದುಕೊಂಡು ಹೋಗಿ. ಯಾವ್ಯಾವ ಹೋಟಲ್‌ನಲ್ಲಿ ಎಷ್ಟೆಷ್ಟು ಬೆಲೆ ಇದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ :- ನಾನು ಪ್ರತಿಪಕ್ಷದ ನಾಯಕನಾಗಿದ್ದಾಗ ಹೋಟಲಿಗೆ ಹೋಗುತ್ತಿದ್ದೆ. ಈಗ ಮಂತ್ರಿಯಾದಮೇಲೆ ನಾನು ಒಂದು ಸಾರಿಯೂ ಹೋಟಲಿಗೆ ಹೋಗಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಆಹಾರ ಮಂತ್ರಿಗಳು ತಾವು ಹೋಟಲಿಗೆ ಹೋದರೆ ನಮ್ಮ ತೊಂದರೆಗಳು ಗೊತ್ತಾಗುತ್ತದೆ. ತಾವು ಆದ್ದರಿಂದ ಹೋಟಲಿಗೆ ಹೋಗಬೇಕು.

(ಗೊಂದಲ)

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಮಾನ್ಯ ಉಪಾಧ್ಯಕ್ಷರೆಯವರೆ, ನಾನು ನಮ್ಮ ಎಲ್ಲಾ ಸದನದ ಸದಸ್ಯರಿಗೂ ಕೈಮುಗಿದು ಪ್ರಾರ್ಥನೆ ಮಾಡುತ್ತಾ, ನಾಳೆಯಿಂದ ಪ್ರತಿಯೊಬ್ಬ ಸದಸ್ಯರು ನನ್ನನ್ನು ಕರೆಯಿರಿ ನಾನು ಹೋಟಲಿಗೆ ಬರುತ್ತೇನೆ. ನೀವು ಹಣವನ್ನು ಕೊಡಿ.

ಶ್ರೀ ಎಂ. ವಿ. ವೆಂಕಟಪ್ಪ :- ಮಾನ್ಯ ಉಪಾಧ್ಯಕ್ಷರೆಯವರೆ, ನಮ್ಮನ್ನು ಅವರು ಕರೆಯಬೇಕು. ಅವರನ್ನು ನಾವೇಕೆ ಕರೆಯಬೇಕು. ಕೆಲವು ಸ್ಟಾರ್ ಹೋಟಲ್‌ಗಳು ಇವೆ. ಫೈವ್ ಸ್ಟಾರ್, ತ್ರೀ ಸ್ಟಾರ್ ಹೋಟಲ್‌ಗಳು ಇವೆ. ಅಲ್ಲಿಯೇ ಒಂದು ರೀತಿಯ ಬೆಲೆ ಇದೆ. ಬೇರೆ ಕಡೆ ಒಂದು ತರಹ ಬೆಲೆ ಇದೆ. ಶ್ರೀ ರಾಮುಲು ಅವರು ಮಾನ್ಯ ದಿವಂಗತ ದೇವರಾಜ್‌ರವರ ಮಂತ್ರಿ ಮಂಡಲದಲ್ಲಿ ಮಂತ್ರಿಯಾಗಿದ್ದಾಗ ಈ ಹೋಟಲ್ ನವರ ಸಹವಾಸಕ್ಕೆ ಕೈ ಹಾಕಿ ಮಂತ್ರಿಗಿರಿಯನ್ನು ಕಳೆದುಕೊಂಡರು. ಬಹುಶಃ ಇವರೇನಾದರೂ ಆ ಹೋಟಲ್‌ನವರಿಗೆ ಕೈಹಾಕಿದರೆ ಮಂತ್ರಿಗಿರಿಯನ್ನು ಕಳೆದುಕೊಳ್ಳುವ ಚಾನ್ಸಸ್ ಬಂದರೂ ಬರಬಹುದು.

ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ನರಸಿಂಹಮೂರ್ತಿಯವರು ಆಹಾರ ಮಂತ್ರಿಯಾಗಿಯೇ ಇರಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಶ್ರೀಮಾನ್ ಕೆ. ಶಿವರಾಮುಲು ಶ್ರೀಮಾನ್ ದಿವಂಗತ ದೇವರಾಜ್ ಅರಸು ಮಂತ್ರಿಮಂಡಲದಲ್ಲಿ ರಾಜ್ಯ ಸಚಿವರಾಗಿದ್ದಾಗ 20 ಅಂಶದ ಕಾರ್ಯಕ್ರಮಗಳ ಜೌಕಟ್ಟಿನಲ್ಲಿ ನಗರದ ಉಸ್ತುವಾರಿ ಸಚಿವರಾಗಿದ್ದಾಗ ಅಂದಿನ ಧಾರಣೆಗಳು ಜಾಸ್ತಿಯಾಗಿದೆ ಎಂದು ಅವರನ್ನು ಮಾಡಿದ್ದುದು. ನನ್ನ ಮಂತ್ರಿಮಂಡಲ ದೇವರ ಆಶೀರ್ವಾದ ಕಡಿಮೆ ಆದಾಗ ಮಾತ್ರ ಹೋಗುತ್ತದೆ ಹೊರತು ಇಲ್ಲದೆ ಹೋಗುವುದಕ್ಕೆ ಸಾಧ್ಯವಿಲ್ಲ.

SRI AZIZ SAIT : Madam, Deputy Speaker, I have requested to withhold that question No.1352.

MADAM DEPUTY SPEAKER : – We will take it later.

ಪ್ರಾಥಮಿಕ ಅಭಿವೃದ್ಧಿ ಬ್ಯಾಂಕ್

1319. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಸಹಕಾರ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ತುಮಕೂರು ಜಿಲ್ಲೆ ಗುಬ್ಬಿ ಪ್ರಾಥಮಿಕ ಅಭಿವೃದ್ಧಿ ಬ್ಯಾಂಕಿನ ಚುನಾವಣೆ ಯಾವ ದಿನಾಂಕದಂದು ನಡೆಯಿತು.

ಆ) ಸ್ಥಳೀಯ ಶಾಸಕರು 3 ಜನ ಸದಸ್ಯರನ್ನು ನಾಮಕರಣ ಮಾಡಬೇಕೆಂದು ಮನವಿ ಸಲ್ಲಿಸಿದ್ದರ ಮೇರೆಗೆ ತಾವುಗಳು ನಾಮಕರಣದ ಆದೇಶ ಮಾಡಿದ್ದು ನಿಜವೆ?

ಇ) ಇದಾದ ಮೇಲೆ ಬೇರೆ ಮೂರು ಜನ ಸದಸ್ಯರನ್ನು ನಾಮಕರಣ ಮಾಡಿದ್ದು ನಿಜವಲ್ಲವೆ?

ಈ) ಇದನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ ಹಾಗೂ ಇದಕ್ಕೆ ನಿಯಮಾವಳಿ ಇದೆಯೇ?

ಉ) ಮತ್ತೆ ಇಬ್ಬರು ಸದಸ್ಯರನ್ನು ನಾಮಕರಣ ಮಾಡಿ ವಾಪಸ್ಸು ಪಡೆದಿದ್ದು ನಿಜವೆ?

ಊ) ನಾಮಕರಣ ಮಾಡಿದಂಥವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಕಾನೂನಿನಲ್ಲಿ ಅವಕಾಶ ಇದೆಯೇ?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು) –

ಅ) 3.10.1991

ಆ) ಹೌದು

ಇ) ಹೌದು

ಈ) ಜಿಲ್ಲಾ ಮಂತ್ರಿಗಳ ಮನವಿಯ ಆಧಾರದ ಮೇಲೆ ಮಾಡಲಾಗಿದೆ. ನಿಯಮಾವಳಿ ಇದೆ..

ಉ) ಹೌದು

ಊ) ಇದೆ

SRI G.S. SHIVANANJAPPA :– Madam I don't want to ask supplementaries.

ಗುಲ್ಬರ್ಗ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ

349. ಶ್ರೀ ಬಾಬುರಾವ್ ಚವಾಣ್ (ಶಹಬಾದ್):– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಗುಲ್ಬರ್ಗ ತಾಲ್ಲೂಕಿನ ಗ್ರಾಮೀಣ ಹಾಗೂ ನಗರದ ಒಟ್ಟು ಸರ್ಕಾರದ ಪ್ರಾಥಮಿಕ ಶಾಲೆಗಳ (1 ರಿಂದ 7) ಸಂಖ್ಯೆ ಎಷ್ಟು;

ಆ) ಸರ್ಕಾರದ ಗ್ರಾಮೀಣ ಹಾಗೂ ನಗರದ ಶಿಕ್ಷಕರ ಸಂಖ್ಯೆ ಎಷ್ಟು; (ಬೇರೆ ಬೇರೆ ಆಗಿ ಮಾಹಿತಿ ನೀಡುವುದು)

ಇ) ಗ್ರಾಮೀಣ ಹಾಗೂ ನಗರದ ಮಕ್ಕಳ ಸಂಖ್ಯೆಗಳು ಎಷ್ಟು; (ವಿವರಗಳನ್ನು ನೀಡುವುದು),

ಈ) ಕೆಲವು ಕಡೆ ಮಕ್ಕಳ ಸಂಖ್ಯೆಗಿಂತ ಶಿಕ್ಷಕರ ಸಂಖ್ಯೆ ಹೆಚ್ಚಿಗೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಗುಲ್ಬರ್ಗ ತಾಲ್ಲೂಕಿನಲ್ಲಿ ಅಂತಹ ಶಾಲೆಗಳು ಯಾವುವು? (ವಿವರ ನೀಡುವುದು)

ಊ) ಇದರ ಬಗ್ಗೆ ಸರ್ಕಾರದ ನಿಲುವು ಏನು?